**ದಿನಾಂಕಃ29.03.2023. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಮುಖ್ಯವಿಚಾರಣೆಃ ಶ್ರೀಮತಿ ಟಿ.ಸುಮಂಗಲಾ ವಕೀಲರಿಂದ ಅರ್ಜಿದಾರರ ಪರವಾಗಿ.**

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅದರಲ್ಲಿ ನನ್ನ ಐಡಿಯನ್ನು ನಿ ಪಿ 17 ಎಂದು, 1 ಆಪರ್ ಲೇಟರ್ ನಿ ಪಿ 18 ಎಂದು, 5 ವೇತನ ಪಟ್ಟಿಗಳನ್ನು ಒಟ್ಟಾಗಿ ನಿ ಪಿ 19 ಎಂದು, ಅಂತಿಮವಾಗಿ ವೇತನ ನೀಡಿದ ದಾಖಲೆ ನಿ ಪಿ 20 ಎಂದು,ಗುರುತಿಸಲಾಯಿತು.ಆದ್ದರಿಂದ ಪ್ರಮಾಣ ಪತ್ರದಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ಕೋರುತ್ತೇನೆ.

**ಪಾಟೀ ಸವಾಲುಃ ಶ್ರೀ ಕೋದಂಡ ವಕೀಲರಿಂದ ಎದುರುದಾರರ ಪರವಾಗಿ**

ನಾನು ಕಂಪನಿಯ ಹೆಚ್ ಆರ್ ಮ್ಯಾನೇಜರ್ ಆಗಿರುವ ಕಾರಣ ಸಾಕ್ಷಿ ಹೇಳಲು ಅಧಿಕಾರ ಪತ್ರ ಹಾಜರು ಪಡಿಸಿಲ್ಲ. ಮೃತರು ತಮ್ಮ ಮರಣದ ಸಮಯದಲ್ಲಿ ನಮ್ಮ ಕಂಪನಿಯಲ್ಲಿ ಶಾಶ್ವತ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದರು. ಪ್ರೊಬೇಷನರಿ ಸಮಯದಲ್ಲಿ ನಮ್ಮ ಕಂಪನಿಯಲ್ಲಿ 6 ತಿಂಗಳು ಇರುತ್ತದೆ ಎಂದರೆ ಸರಿಯಲ್ಲ. 3 ತಿಂಗಳು ಮಾತ್ರ ಇರುತ್ತದೆ. ಆಪರ್ ಲೇಟರ್ ಮಾತ್ರ ನೀಡಿದ್ದು, ನೇಮಕಾತಿ ಪತ್ರ ನೀಡಿರುವುದಿಲ್ಲ. ವೇತನವನ್ನು ಅವರ ಖಾತೆಗೆ ಸಲ್ಲಿಸುತ್ತಿದ್ದೇವು. ನಮ್ಮ ಕಂಪನಿಯ ಪಾರಂ 16 ನ್ನು ಹಾಜರು ಪಡಿಸಲು ಆಗುವುದಿಲ್ಲ. ನಾನು ಮೃತರ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿಲ್ಲ ನಾನು ಎಲ್ಲಾ ದಾಖಲೆಗಳನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು

ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯಲ್ಲಿ ಹಾಜರಾತಿ ಪುಸ್ತಕ ಇಟ್ಟುಕೊಂಡಿದ್ದೇವೆ. ಅದನ್ನು ಹಾಜರು ಪಡಿಸಬಹುದು. ನಮ್ಮ ಕಂಪನಿಯಲ್ಲಿ ಮೆಡಿಕ್ಲೇಮ ಇದ್ದು ಅಪಘಾತಕ್ಕೆ ಸಂಬಂದಿಸಿದಂತೆ ಯಾವುದೇ ವಿಮೆ ಇರುವುದಿಲ್ಲ. ಮೃತರ ಕುಟುಂಬದವರಿಗೆ ನಾವು ಯಾವುದೇ ಕೆಲಸ ನೀಡಿರುವುದಿಲ್ಲ. ದಾಖಲೆಗಳ ಪ್ರಕಾರ ಅವರ ವೇತನ 25,000/- ರೂಗಳು ಇರುತ್ತದೆ. ಅವರಿಗೆ ಮುಂಗಡ ಹಣ ನೀಡಿದ್ದ ಕಾರಣ ದಾಖಲೆಗಳಲ್ಲಿ ಕಡಿಮೆ ಮೊತ್ತ ತೋರಿಸಲಾಗಿದೆ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.